

ಚಿತ್ರ: ಕಾರ್ನ್ ಐಲ್ಯಾಂಡ್
(ಜಾರ್ಜಿಯಾ)
ನಿರ್ದೇಶನ: ಜಾರ್ಜ್ ಒವ್ಯಾಷ್‌ವಿಲಿ
ಸಂಗೀತ: ಲೋಶೆಬ್ ಬರ್ದನಾಶ್‌ವಿಲಿ
ಛಾಯಾಗ್ರಹಣ: ಎಲಿಮರ್ ರಗಲ್ಯಿ
ಅವಧಿ: 100 ನಿಮಿಷ

ಪ್ರಕೃತಿಯೇ ಕೇಂದ್ರ ಪಾತ್ರವಾಗಿ, ಕೃಷಿಕನೊಬ್ಬನ ಸಾಹಸ ಕಥನದ ನಡುವೆ ಯುದ್ಧ ಸೂಕ್ಷ್ಮಗಳನ್ನು ನಿರ್ಭಾವುಕವಾಗಿ 'ಕಾರ್ನ್ ಐಲ್ಯಾಂಡ್' ತೋರುತ್ತದೆ. ಇದು ಕಟ್ಟುವ ಪ್ರಕ್ರಿಯೆಯ ಸಿನಿಮಾ.

ತಲುಪುವುದು, ಅಲ್ಲಿನ ಮಣ್ಣಿನ ಗುಣ ಅರಿಯುವುದು, ಅಲ್ಲೊಂದು ಬಾವುಟ ನೆಡುವುದು, ತಾತ್ಕಾಲಿಕ ಮನೆ ನಿರ್ಮಿಸಿ ಅದರ ಸುತ್ತ ಜೋಳ ಬೆಳೆಯುವುದು... ಎಲ್ಲವೂ ಸಿನಿಮೀಯವಲ್ಲ ಎನ್ನಬಹುದಾದಷ್ಟು ಸಹಜವಾಗಿ ಚಿತ್ರೀಕರಣಗೊಂಡಿವೆ. ಈ ರೈತ ಇಷ್ಟೆಲ್ಲವನ್ನು ತಾನೊಬ್ಬನೇ ಮಾಡುತ್ತಾ, ಮೊಮ್ಮಗಳ ಅಲ್ಪ ಸಹಾಯ ಪಡೆದುಕೊಳ್ಳುವ ಬಗೆಯಲ್ಲೇ ತಣ್ಣಗಿನ ಸಾಹಸ ಬಿಂಬಿತವಾಗುತ್ತದೆ.

ಸಿನಿಮಾದಲ್ಲಿ ಮೊದಲ ಸಂಭಾಷಣೆ ಕೇಳುವುದು ಇಪ್ಪತ್ತು ನಿಮಿಷಕ್ಕೂ ಹೆಚ್ಚಿನ ಅವಧಿ ಸರಿದ ಮೇಲೆ. ಮತ್ತೆ ಅರ್ಧ ತಾಸು ಮಾತೇ ಇಲ್ಲ. ಅಜ್ಜ ಹಾಗೂ ಮೊಮ್ಮಗಳ ನಡುವಿನ ಸಂವಹನವೆಲ್ಲಾ ಕಣ್ಣನ್ನೆ, ಇಶಾರೆಗಳಲ್ಲೇ ನಡೆಯುತ್ತವೆ. ಮುಂದೇನಾಗುತ್ತದೆ ಎಂಬ ಕುತೂಹಲವನ್ನು ಉಳಿಸಿಕೊಂಡು ಹೋಗುವ ಕ್ರಮ ಕೂಡ ಸಿನಿಮಾದಲ್ಲಿ ಆಸಕ್ತಿಕರವಾಗಿದೆ. ಗಾಯಗೊಂಡ ಜಾರ್ಜಿಯನ್ ಯೋಧನೊಬ್ಬನಿಗೆ ರೈತ ತನ್ನ ತಾತ್ಕಾಲಿಕ ಮನೆಯಲ್ಲೇ ಚಿಕಿತ್ಸೆ ಕೊಟ್ಟು ಕಾಪಾಡುತ್ತಾನೆ. ಒಂದು ಕಡೆ ಮೊಮ್ಮಗಳನ್ನು ಕಾಪಾಡಿಕೊಂಡು, ಇನ್ನೊಂದು ಕಡೆ ಆ ಯೋಧ ಹೊರಗಿನವರ ಕಣ್ಣಿಗೆ ಬೀಳದಂತೆ ನಿಗಾ ವಹಿಸುವ ಸೂಕ್ಷ್ಮ ಸಂದರ್ಭದಲ್ಲಿ ಕೂಡ ಮಾತಿನ ಬಳಕೆಯಾಗದೇ ಇರುವುದು ಅಚ್ಚರಿಯೇ ಸರಿ. ಇದು ಎಲ್ಲೂ ಕೊರತೆ ಎನಿಸದೇ ಇರುವುದು ನಿರ್ದೇಶಕರ ಜಾಣ್ಮೆಗೆ ಸಾಕ್ಷಿ.

'ರಿಯಲಿಸ್ಟಿಕ್' ಆಗಿಯೇ ಎಲ್ಲವನ್ನೂ ಕಾಣಿಸಬೇಕೆಂಬ ಮಹತ್ವಾಕಾಂಕ್ಷಿ ನಿರ್ದೇಶಕ ಒವ್ಯಾಷ್‌ವಿಲಿ. ಅವರು ಮೊದಲು ತಮ್ಮ ದೇಶ ನೀಡುವ ಹಣಸಹಾಯವನ್ನೇ ಸಿನಿಮಾ ನಿರ್ಮಾಣಕ್ಕೆ ಬಳಸಿಕೊಳ್ಳಲು ನಿರ್ಧರಿಸಿದ್ದರು. ಅದನ್ನು ಕೊಡಮಾಡುವ ಸಂಸ್ಥೆಗೂ ಚಿತ್ರಕಥೆ ಹಿಡಿಸಿತ್ತು. ಆದರೆ, ಚಿತ್ರೀಕರಣ ಪ್ರಾರಂಭಿಸುವ ಮುನ್ನ ದ್ವೀಪದ ಕೃತಕ ಸೆಟ್ ಹಾಕಲು ಅವರು ಮುಂದಾದಾಗ ಸಿನಿಮಾದ ಬಜೆಟ್ ದೊಡ್ಡದಾಗಿದೆ ಎನ್ನುವುದು ಆ ಸಂಸ್ಥೆಗೆ ಗೊತ್ತಾಗಿ, ಹಣ ನೀಡಲು ಹಿಂದೆಮುಂದೆ ನೋಡಿತು. ವರ್ಷಗಟ್ಟಲೆ ಹೆಣೆದಿದ್ದ ಸಿನಿಮಾ ಕನಸನ್ನು ಒವ್ಯಾಷ್‌ವಿಲಿ